ಸರ್ಕಾರಕ್ಕೆ ಜನರ ಬಗ್ಗೆ ನಿಜವಾಗಿ ಕಾಳಜಿ ಇದೆಯೆ? ಕುಡಿಯುವ ನೀರಿನ ಅಭಾವ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಅದಕ್ಕೆ ಉತ್ತರಿಸುವುದಕ್ಕೆ ಸಮಯಬೇಕೆಂದರೆ ಹೇಗೆ? ನಾವು ಸರ್ಕಾರವನ್ನು ಇನ್ಯಾವ ರೀತಿ ಎಚ್ಚರಿಸಬೇಕು. ನೀರಿಲ್ಲ, ಜನಗಳಿಗೆ ತೊಂದರೆಯಾಗಿದೆ. ದನಗಳು ಸತ್ತು ಹೋಗಿವೆ ಎಂದು ರೆಕಾರ್ಡ್ ಆಗಿದೆ. ಇನ್ನು ಯಾವ ರೀತಿಯಲ್ಲಿ ನಾವು ಸರ್ಕಾರವನ್ನು ಎದುರಿಸಬೇಕು.

ಅಧ್ಯಕ್ಷರು: ಈ ಪ್ರಶ್ನೆಗೆ ಉತ್ತರ ಮುಂದಿನ ಗುರುವಾರ ಬರುತ್ತದೆ.

ಶ್ರೀ ಬಿ.ಎಚ್. ಬನ್ನಿಕೋಡ್: ನಾನು ಸಾಹೇಬರನ್ನು ಕೇಳುತ್ತಿದ್ದೇನೆ. ಕುಡಿಯಲಿಕ್ಕೆ ನೀರಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ ಈಗಾಗಲೇ ಸ್ಕೇರ್‌ಸಿಟಿ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಅವರು ತಾಲ್ಲೂಕುವಾರು ಎಕ್ಸ್‌ಪೆಂಡಿಚರ್ ಕೇಳಿದ್ದಾರೆ. ಪ್ರತಿ ತಾಲ್ಲೂಕಿನಿಂದ ಇನ್‌ಫರ್‌ಮೇಷನ್ ಬರಬೇಕಾಗಿದೆ. ಅವುಗಳನ್ನೆಲ್ಲಾ ಕಲೆಕ್ಟ್ ಮಾಡಿ ಕಳುಹಿಸುವುದಕ್ಕೆ ಸ್ವಲ್ಪ ಲೇಟಾಗುತ್ತದೆ. ಸುಮಾರು 13-14 ತಾಲ್ಲೂಕುಗಳಿಂದ ಬರಬೇಕು. ಅದಕ್ಕಾಗಿ ನಾವು ಡೆಪ್ಯೂಟಿ ಕಮೀಷನರ್‌ಗಳಿಗೆ ಟೆಲೆಕ್ಸ್ ಕೊಟ್ಟು ಫೋನ್ ಮಾಡಿ ತಿಳಿಸಿದ್ದೇವೆ. ಆದರೂ ಇನ್ನೂ ಕಳುಹಿಸಿಲ್ಲ. ಕಲೆಕ್ಟ್ ಮಾಡುತ್ತಿದ್ದಾರೆ. ನಾಳೆ ಬಂದಮೇಲೆ ಮುಂದಿನ ಬುಧುವಾರ ತೆಗೆದುಕೊಳ್ಳೋಣ

ಶ್ರೀ ಬಿ.ಎಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ ಸದನದಲ್ಲಿ ಕೊನೆಗೆ ಉಳಿದಿರುವುದು ಧರಣಿ ಮಾಡುವುದು ಕುಡಿಯುವ ನೀರಿನ ಬಗ್ಗೆ ಸರ್ಕಾರ ಗಮನಹರಿಸುತ್ತದೆಯೇ? ಮಾನ್ಯ ಮಂತ್ರಿಗಳು ಸಂಭಂಧಪಟ್ಟ ಅಧೀಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೆಯೇ ಎನ್ನುವುದನ್ನು ಹೇಳಬೇಕು. ಮತ್ತು ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಸಾಕಷ್ಟು ಹಣವನ್ನು ಧಾರವಾಡ ಜಿಲ್ಲೆಗೆ ಕುಡಿಯುವ ನೀರಿಗಾಗಿ ನಾವು ಬಿಡುಗಡೆ ಮಾಡಿದ್ದೇವೆ. ಮತ್ತು ನಿನ್ನೆಯೂ ಕೂಡಾ ಮಾನ್ಯ ಸದಸ್ಯರು ಹೇಳಿದ ಮೇಲೆ ನಾನು ಸುಮಾರು 15 ಲಕ್ಷ ರೂಪಾಯಿಗಳನ್ನು ಧಾರವಾಡ ಜಿಲ್ಲೆಗೆ ಕುಡಿಯುವ ನೀರಿಗಾಗಿ ರಿಲೀಸ್ ಮಾಡಿದ್ದೇವೆ ಮಾನ್ಯ ಸದಸ್ಯರು ಸ್ಪೆಸಿಫಿಕ್ಕಾಗಿ ಅವರ ತಾಲ್ಲೂಕಿನಲ್ಲಿ ಒಂದೂ ಬೋರ್‌ವೆಲ್ ಆಗಿಲ್ಲವೆಂದು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನಾನು ಡೆಪ್ಯೂಟಿ ಕಮೀಷನರ್‌ರವರಿಗೆ ಈಗಾಗಲೇ ಆದೇಶ ಕೊಟ್ಟಿದ್ದೇನೆ.

ಭೂಡಾಖಿಲಾತಿ ಸಹಾಯಕ ನಿರ್ದೇಶಕರುಗಳ ಕಛೇರಿಗಳಲ್ಲಿ ಅಳತೆಗೆ ಬಾಕಿ ಇರತಕ್ಕ ಕಡತಗಳ ಬಗ್ಗೆ.

530 - ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ), ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂದಾಖಿಲಾತಿ ಸಹಾಯಕ ನಿರ್ದೇಶಕರುಗಳ ಕಛೇರಿಗಳಲ್ಲಿ ಎಷ್ಟು ಕಡತಗಳು ಅಳತೆಗೆ ಬಾಕಿ ಇವೆ?

ಆ) ಅಳತೆಗೆ ಬಾಕಿ ಇರತಕ್ಕ ಕಡತಗಳನ್ನು ತಕ್ಷಣ ವಿಲೇವಾರಿ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?

ಮಲ್ಲಿಕಾರ್ಜುನ ಎಂ. ಖರ್ಗೆ, (ಕಂದಾಯ ಸಚಿವರು) :

ಅ) ಒಟ್ಟು 1,38,382 ಕಡತಗಳು ಬಾಕಿ ಇರುತ್ತವೆ. ಸಿಬ್ಬಂದಿ ಕೊರತೆ ಇರುವುದರಿಂದ ಕಡತಗಳು ಬಾಕಿ ಇರುತ್ತವೆ.

1. ನಿಯತಕಾಲಿಕ ಪುನರ್ವಿಮರ್ಶೆಯನ್ನು ನಡೆಸಲಾಗುತ್ತಿದೆ.
2. ಭೂಮಾಪಕರ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

11.45 ಎ.ಎಂ.

ಶ್ರೀ ಎ. ರುಕ್ಕಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ ನಾನು ಭೂದಾಖಲಾತಿ ಸಹಾಯಕ ನಿರ್ದೇಶಕರುಗಳ ಕಛೇರಿಗಳಲ್ಲಿ ಎಷ್ಟು ಕಡತಗಳು ಬಾಕಿ ಇವೆ ಎಂದು ಕೇಳಿದ್ದಕ್ಕೆ ಒಟ್ಟು 1,38,382ಕಡತಗಳು ಬಾಕಿ ಇರುತ್ತವೆ, ಸಿಬ್ಬಂದಿ ಕೊರತೆಯಿರುವುದರಿಂದ ಕಡತಗಳು ಬಾಕಿ ಇರುತ್ತವೆ ಎಂದು ಹೇಳಿದ್ದಾರೆ. ಅಳತೆಗೆ ಬಾಕಿ ಇರತಕ್ಕ ಕಡತಗಳನ್ನು ತಕ್ಷಣ ವಿಲೇವಾರಿ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು ಎಂದು ಕೇಳಿದಕ್ಕೆ ನಿಯತಕಾಲಿಕ ಪುನರ್ವಿಮರ್ಶೆಯನ್ನು ನಡೆಸಲಾಗುತ್ತಿದೆ ಹಾಗೂ ಭೂಮಾಪಕರ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ. ಈ ಕಡತಗಳು ಹಲವಾರು ವರ್ಷಗಳಿಂದಲೂ ಬಾಕಿ ಇವೆ. ಇದರಿಂದಾಗಿ ರೈತರು ತಾಲ್ಲೂಕು ಆಫೀಸು ಮತ್ತು ಭೂದಾಖಲಾತಿಯ ಆಫೀಸಿಗೂ ಅಲೆದಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಆದಷ್ಟು ಬೇಗ ವಿಲೇವಾರಿ ಮಾಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರು ಇದನ್ನು ಒಪ್ಪಿಕೊಳ್ಳತಕ್ಕಂಥಾದ್ದೆ ಏಕೆಂದರೆ ಸುಮಾರು 320 ಏರಡನೇ ದರ್ಜೆ ಭೂಮಾಪಕರು ಮತ್ತು 86 ಪ್ರಥಮ ದರ್ಜೆ ಭೂಮಾಪಕರು ವೆಕೆನ್ಸಿ ಇದೆ. ಅವನ್ನು ಎಕಾನಮಿ ಮೇಜರ್ ಎಂದು ಹೇಳಿ ರೆಕ್ರೂಟ್‌ಮಾಡಿಲ್ಲ ಈ ಬಗ್ಗೆ ಈಗಾಗಲೇ ನಾವು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಬರೆದಿದ್ದೇನೆ. ಇದರ ಬಗ್ಗೆ ರಿಲ್ಯಾಕ್ಸ್ ಮಾಡಲಿಕ್ಕೆ ಹೇಳಿದ್ದೇವೆ. ಲಕ್ಷಾಂತರ ಕೇಸಸ್ ನೋಡಿ ಮತ್ತಿತರದ್ದು ಉಳಿದಿದೆ. ಆದನ್ನು ನಾವು ಕಂಪ್ಲೀಟ್ ಮಾಡಬೇಕಾದರೆ ನಮಗೆ ಫುಲ್ ಸ್ಟಾಪ್ ಬೇಕೆಂದು ಹೇಳುತ್ತಾರೆ. ಅವರೂ ಕೂಡ ಇದನ್ನು ಗಮನಕ್ಕೆ ತೆಗೆದುಕೊಂಡಿದ್ದಾರೆ. ಬಹುಶಃ ಆ ಹುದ್ದೆಗಳನ್ನು ಫಿಲಪ್ ಮಾಡಿದಮೇಲೆ ಇವು ಯಾವುದೂ ಕೂಡ ಉಳಿಯುವುದಿಲ್ಲ ಹಳೆಯ ಕೇಸ್‌ಗಳ ಕಡತಗಳು ಬಹಳ ದಿವಸಗಳಿಂದ ಉಳಿದಿವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಕ್ಕೆ ಮೊದಲು ಆದ್ಯತೆ ಕೊಡಬೇಕು ಎನ್ನತಕ್ಕ ಆದೇಶವನ್ನು ನಾನು ಅಲ್ಲಿ ಸಂಬಂಧಪಟ್ಟ ಎ.ಡಿ.ಎಲ್.ಆರ್.ರವರಿಗೆ ಕೊಡುತ್ತೇನೆ.

ಶ್ರೀ ಎ.ರುಕ್ಮಯ್ಯ ಪೂಜಾರಿ : ಶ್ರೀಮಂತರು ಎ.ಡಿ.ಎಲ್.ಆರ್.ಆಫೀಸಿಗೆ ತಹಶೀಲ್ದಾರ್ ಆಫೀಸಿಗೆ ಹೋಗಿ ಹೇಗೋ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಆದರೆ ಹಳ್ಳಿಯಲ್ಲಿರತಕ್ಕ ಬಡ ರೈತರಿಗೆ ಇದು ಅಸಾಧ್ಯವಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅದು ನನ್ನ ಗಮನಕ್ಕೆ ಬಂದಿದೆ. ಹೋದಸಾರಿ ನಾನು ಸೌತ್ ಕೆನರಾಕ್ಕೆ ಬಂದಿದ್ದಾಗ ಇದನ್ನು ಕಂಪ್ಲೀಟ್ ಆಗಿ ರೆವ್ಯೂ ಮಾಡಿದ್ದೇನೆ. ಅದು ಏನಾಗಿದೆ ಅಂದರೆ ಪ್ರತಿ ತಿಂಗಳು 10ಸಾವಿರ ಮಾಡಬೇಕಾಗುತ್ತದೆ. ಅಲ್ಲಿ ಸ್ಟಾಫ್ ಕೊರತೆ ಇದ್ದ ಕಾರಣ ಒಂಭತ್ತು ಸಾವಿರಕ್ಕಿಂತ ಹೆಚ್ಚಿನ ಟಾರ್‌ಗೆಟ್ ಅನ್ನು ಅವರು ಮುಟ್ಟಲಿಕ್ಕೆ ಆಗುತ್ತಿಲ್ಲ. ಆದ್ದರಿಂದ ಪ್ರತಿ ತಿಂಗಳು ಒಂದೊಂದು ಸಾವಿರ ಕಡತಗಳು ಹಿಂದೆ ಬೀಳುತ್ತವೆ. ಅದನ್ನು ಕಂಪ್ಲೀಟ್ ಮಾಡಿ ಎಂದು ಆದೇಶ ಕೊಡುತ್ತಿದ್ದೇವೆ ಮತ್ತು ಸ್ಟಾಫ್ ಕೂಡ ಫಿಲ್ ಅಪ್ ಆದರೆ ಈ ಪ್ರಶ್ನೆ ಮುಂದೆ ಉದ್ಭವಿಸುವುದಿಲ್ಲ.